**ದಿಃ29.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಶ್ರೀ. ಹಿ.ಸ.ಸ.ಅ.ರವರಿಂದ**

ಸಾಕ್ಷಿಯು ದಿ.01.03.2019 ರ ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಅಮಾನತ್ತು ಪಂಚನಾಮೆ ಮಾಡುವಾಗ ಚಾಸಾ-2 ಮತ್ತು ಮತ್ತೊಬ್ಬ ಪ್ರದೀಪ್ ಕುಮಾರ್ ಎನ್ನುವವರು ಹಾಜರಿದ್ದು, ಅವರು ಸಹ ಸಹಿಗಳನ್ನು ಮಾಡಿರುತ್ತಾರೆ. ಸದರಿ ಅಮಾನತ್ತು ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ತನಿಖಾಧಿಕಾರಿ ಯವರು ನಮ್ಮ ಸೈಟ್ ಗೆ ಹಾಕಿದ್ದ ಒಂದು ಬ್ಯಾನರ್ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಾನು ಕೆ.ಎಸ್. ಕೃಷ್ಣ ಮೂರ್ತಿ ಎನ್ನುವವರಿಂದ ಸೈಟ್ ನಂ.31 ನ್ನು ಖರೀದಿ ಮಾಡಿದ್ದು, ಸದರಿ ಕೆ.ಎಸ್.ಕೃಷ್ಣ ಮೂರ್ತಿ ರವರು ಆರೋಪಿತರ ತಂದೆ ಮತ್ತು ಅವರ ಕುಟುಂಬದ ಸದಸ್ಯರಿಂದ ದಿ.13.07.1987 ರಂದು ಶುದ್ದ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದು, ಸಾಕ್ಷಿ ಸದರಿ ಶುದ್ದ ಕ್ರಯ ಪತ್ರವನ್ನು ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ದಿ.16.07.1998 ರಂದು ನನ್ನ ಗಂಡ ಅಂದರೆ ವೈ.ಸಿ. ಉದಯ್ ಕುಮಾರ್ ರವರು ಕೆ.ಎಸ್. ಕೃಷ್ಣ ಮೂರ್ತಿ ರವರಿಂದ ಖರೀದಿಸಿರುವ ಸೈಟಿನ ದೃಡೀಕೃತ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ಸಾಕ್ಷಿಯು ಸೈಟ್ ನಂ.31ಕ್ಕೆ ಸಂಬಂದಪಟ್ಟ ಕಂದಾಯ ರಸೀದಿ, ಇ.ಸಿ, ವಿದ್ಯುತ್ ಸಂಪರ್ಕ ರಸೀದಿ, ನೀರಿನ ಸರಬರಾಜು ರಸೀದಿಗಳ ದೃಡೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದು (ಪುಟಸಂಖ್ಯೆಃ39 ರಿಂದ 48) ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ.6 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮೂಲ ದಾಖಲಾತಿಗಳು ಇಲ್ಲದೇ ಇರುವುದರಿಂದ ಹಿ.ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿರುತ್ತಾರೆ. ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**

**ಬೆಂಗಳೂರು.**